ಫೀಲ್ಡ್ ನಲ್ಲಿ ನೀವು ಕೂಡ ಸಂತೋಷದಿಂದ ಕೆಲಸ ಮಾಡಬಲ್ಲಿರಿ. ಯಾರಿಗೆ ಗೊತ್ತು, ಇನ್ನು ಚೆನ್ನಾಗಿಯೇ ಸಂಪಾದನೆ ಮಾಡಲೂಬಹುದು. ಆರ್ಥಿಕ ಪರಿಸ್ಥಿತಿ, ಆರೋಗ್ಯ ಎರಡೂ ಸುಧಾರಿಸುತ್ತೆ. ಇನ್ನೇನು ತಲೆಕೆಡಿಸಿಕೊಳ್ಳದೆ ಹೊರಟು ಬಿಡಿ. ಬಲವಂತವಾಗಿ ಒಪ್ಪಿಸಿ ಬಿಟ್ಟಳು ಸರಸ್ವತಿ. ಈ ಅವಕಾಶ ಸಿಕ್ಕಿದ ಆನಂದದಿಂದ ಹೊಸ ಚೈತನ್ಯ, ಲವಲವಿಕೆ ಕಂಡುಬಂದಿದೆ ಅವಳಲ್ಲಿ. ಅದನ್ನು ಗಮನಿಸಿದ ರಘುಪತಿಗೆ ತಾವಿಬ್ಬರೂ ಆನಂದವಾಗಿ ಕಳೆದ ಆ ವೈಭವದ ದಿನಗಳು ಮತ್ತೊಮ್ಮೆ ಕಣ್ಣು ತುಂಬುತ್ತದೆ.

ಕಳೆದ ಇಪ್ಪತ್ತು ದಿನಗಳಿಂದ, ಹದಿನೆಂಟು ದಿನಗಳಷ್ಟು ಶೂಟಿಂಗ್‌ನಲ್ಲಿ ಬ್ಯುಸಿಯಾಗಿ ಬಿಟ್ಟಿದ್ದ. ಸ್ವಲ್ಪ ಬಿಡುವಾಗಿದ್ದಾಗ ಸುಭದ್ರಮ್ಮ ಏರ್ಪಾಟು ಮಾಡಿದ್ದ ಸೆಲ್ ಫೋನ್ ನಲ್ಲಿ ಮಾತನಾಡುತ್ತಿದ್ದ. ಸರಸ್ವತಿಯ ಆರೋಗ್ಯ ಕೂಡ ಈಗ ಸ್ವಲ್ಪ ಸುಧಾರಿಸಿದೆ. ಇದು ಎಲ್ಲಕಿಂತ ಹೆಚ್ಚು ಸಂತೋಷ ಕೊಟ್ಟ ಸುದ್ದಿಯಾಗಿದೆ. ಇರುವುದಕ್ಕೆ ಜಾಗ ಮಾಡಿಕೊಟ್ಟ ರಾಜು. ಬೆಳಗಿನ ಕಾಫಿ, ರಾತ್ರಿ ಊಟದ ಖರ್ಚು ಬಿಟ್ಟರೆ ತಿಂಡಿ, ಕಾಫಿ, ಊಟ ಎಲ್ಲವೂ ಸೆಟ್ ನಲ್ಲಿ ಆಗಿಹೋಗಿತ್ತು ಖರ್ಚಿಲ್ಲದೆ. ರಘುಪತಿ ಎಷ್ಟೋ ಸಂತೋಷದಿಂದ ಇರಬೇಕೆಂದು ಪ್ರಯತ್ನ ಪಟ್ಟರು.

ಒಳಗೊಳಗೆ ಬದಲಾದ ಹೆಸರು, ಯಾರೋ ಅನಾಮಧೇಯನೆಂಬಂತೆ, ಒಬ್ಬ ಎಕ್ಸ್ಟ್ರಾ ರೀತಿ, ಇಂದಿನ ದಿನಗಳಲ್ಲಿ ಫೀಲ್ಡ್ ನಲ್ಲಿ ಪ್ರಯೋಗಿಸುವ ಭಾಷೆಯ ಪ್ರಕಾರ ಒಬ್ಬ ಜೂನಿಯರ್ ಆರ್ಟಿಸ್ಟ್ ಆಗಿ 'ಇಮೇಜ್' ಆಗಲಿ ಪರಿಚಯ ಎಂದಾಗಲಿ ಇಲ್ಲದಂತೆ, ಯಾವುದೋ ಒಂದು ಮರದ ಕೆಳಗೆ ಕೂತು, ತಟ್ಟೆಯನ್ನು ಕೈಲಿ ಹಿಡಿದು ಊಟ ಮಾಡುತ್ತಾ 'ಬಾ' 'ಹೋಗು' ಎಂದು ಏಕವಚನದಲ್ಲಿ ಕರೆಸಿಕೊಳ್ಳುತ್ತಾ ಇರಬೇಕಾದ ಪರಿಸ್ಥಿತಿ ಅವನನ್ನ ತುಂಬಾ ಒಳಗೆ ಬಾಧಿಸುತ್ತಿದೆ.

ಇನ್ನೊಂದ್ ಹತ್ತು ದಿನ ದಿನ ಕಳೆಯಿತು.

ಆ ಒಂದು ದಿನ, ಸೀರಿಯಲ್ ನಲ್ಲಿ ತನ್ನ ಪಾತ್ರವನ್ನು ನಟಿಸುತ್ತಿದ್ದಾನೆ ರಘುಪತಿ ...ಅಸೋಸಿಯೇಟ್ ಡೈರೆಕ್ಟರ್ ತನ್ನ ಅಹಂಕಾರವನ್ನು ಪ್ರದರ್ಶಿಸುತ್ತಾ.. 'ರಘುಪತಿಯನ್ನು ಉದ್ದೇಶಿಸಿ, ತನ್ನ ಸ್ಟೈಲ್‌ನ ಫಾಲೋ ಮಾಡ್ತಿಲ್ಲ, ತನಗೆ ಬೇಕಾದ ಎಫೆಕ್ಟ್ ಬರೋಥರ ನಟಿಸಲು ಆಗೊಲ್ಲ' ಎಂದು 'ಎಲ್ಲಿಂದ ಹಿಡ್ಕೊಂಡು ಬರ್ತಿರಯ್ಯಾ ಈ ಮೊಖಗಳನ್ನ? ನೆಟ್ಟಗೆ ಒಂದು ಡೈಲಾಗ್ ಹೇಳಲು ಬರಲ್ಲ, ಒಂದು ಎಕ್ಸ್‌ಪ್ರೆಷನ್, ಒಂದು ರಿಯಾಕ್ಷನ್ ಕೊಡಕ್ಕೆ ಬರಲ್ಲ' ಅಂತ ತಲೆ ಚಚ್ಚಿಕೊಳ್ಳುತ್ತಾ ರಾಜುವಿನ ಕಡೆ ನೋಡುತ್ತಾನೆ. ಸ್ವಲ್ಪ ದೂರದಲ್ಲಿ ಕುಳಿತು ನೆಕ್ಸ್ಟ್ ಸೀನ್ ನ ಸ್ಕ್ರಿಪ್ಟ್ ಅವಲೋಕಿಸುತ್ತಿರುವ ಪ್ರಧಾನ ನಿರ್ದೇಶಕ ದೊಡ್ಡ ಗಂಟಲಲ್ಲಿ 'ಕಿತ್ ಬಿಸಾಕ್ರಯ್ಯ ಇಂಥವರನ್ನೆಲ್ಲಾ ಇಟ್ಕೊಂಡು ಟೈಮ್ ವೇಸ್ಟ್...ರಾಜು...ಬೇರೆ ಯಾರನ್ನಾದ್ರು ಕರಸು' ಅಂತ ಕಿರುಚುತ್ತಾನೆ.

ಅದೇ ಸಮಯಕ್ಕೆ ಲೊಕೇಷನ್ನಿಗೆ ಬಂದ ಆ ಸೀರಿಯಲ್ ಪ್ರೊಡ್ಯೂಸರ್. ಯಾವತ್ತೂ ಹೀಗೆ ದಿಢೀರನೆ ಲೊಕೇಷನ್ ಗೆ ಬಾರದ ಪ್ರೊಡ್ಯೂಸರ್ ಇಂದು ಬಂದದ್ದು ಕೊಂಚ ತಬ್ಬಿಬ್ಬಾಗಿ ಎದ್ದು ನಿಂತು ವಿಷ್ ಮಾಡುತ್ತಾನೆ ನಿರ್ದೇಶಕ.

'ಪ್ಲೀಸ್ ಸಿಟ್ ಡೌನ್, ಕಮಾನ್, ಕಂಟಿನ್ಯೂ ಶೂಟಿಂಗ್. 'ಡೋಂಟ್ ಸ್ಟಾಪ್, ಇವತ್ತು ಸ್ವಲ್ಪ ಬಿಡುವಾಗಿದ್ದೆ ಅಷ್ಟೇ' ಅಂತ ನಗುತ್ತಾ, ಸ್ವಲ್ಪ ಮುಂದಕ್ಕೆ ನಡೆದು, ಡೈಲಾಗ್ ಹೇಳುತ್ತಿರುವ ರಘುಪತಿಯನ್ನ ನೋಡಿ....ಕಣ್ಣು ಅರಳಿಸಿ ನೆನಪಿಸಿಕೊಳ್ಳುತ್ತಾ.. ಅಸೋಸಿಯೇಟ್ ಡೈರೆಕ್ಟರ್ ನ ಉದ್ದೇಶಿಸಿ 'ರೀ. ಅವರು ರಘುಪತಿ ಅಲ್ವಾ?' ಅಂತ ಕೇಳುತ್ತಾನೆ. 'ಅವ್ನಾ...ಯಾರೋ.. ರಾಘವಯ್ಯ ಅಂತ ಸರ್, ಜೂನಿಯರ್ ಆರ್ಟಿಸ್ಟ್. ಬೆಳಗ್ಗೆಯಿಂದ ಸಾಯಿಸ್ತಾ ಇದಾನೆ ಸರ್. ಬದಲಾಯಿಸಿ ಹಾಕೋಣ ಅಂತ ಅಂದ್ಕೊಳ್ತಾ ಇದ್ದೀವಿ' ಅಂದ ಅಸೋಸಿಯೇಟ್ ಡೈರೆಕ್ಟರ್.

ಥಟ್ಟನೆ ಅವನತ್ತ ತಿರುಗಿ ನೋಡಿದ ಪ್ರೊಡ್ಯೂಸರ್ 'ಏನು ಮಾತಾಡ್ತಾ ಇದ್ದಿರ್ರೀ ನೀವು?' ಎಂದು ಡೈರೆಕ್ಟರ್ ಕಡೆ ತಿರುಗಿ 'ಏನ್ರೀ.. ನಿಮಗೂ ಗೊತ್ತಾ ಇವರು?' ಅಂತ ಕೇಳ್ತಾನೆ. 'ಆ.. ಹೊಹುಂ ..ಇಲ್ಲ' ಅಂದ ಡೈರೆಕ್ಟರ್. 'ಓಹೋ! ಅದಕ್ಕೆ ನೀವೆಲ್ಲಾ ಜೂನಿಯರ್ ಆರ್ಟಿಸ್ಟ್ ಅಂತ ಟ್ರೀಟ್ ಮಾಡ್ತಿದ್ದೀರಾ?' ಪ್ರೊಡ್ಯೂಸರ್ ಕೋಪ ನೆತ್ತಿಗೇರಿತ್ತು. ಬೈಸಿಕೊಂಡು ತಬ್ಬಿಬ್ಬಾಗಿ ನೋಡುತಾನೆ ಡೈರೆಕ್ಟರ್. 'ಒಂದು ಕಾಲದಲ್ಲಿ ಸಿನಿಮಾ ಕ್ಷೇತ್ರದಲ್ಲಿ ಮಹಾನ್ ಕಲಾವಿದನಾಗಿ ಮೆರೆದ ರಘುಪತಿ ಇವರು. ಏನೋ ಅವರ ದುರಾದೃಷ್ಟವೋ ನಾಯಕ ಅನಿಸಿಕೊಳ್ಳದಿದ್ರೂ ಸರಿ ಸಮಾನ ಪಾತ್ರಗಳನ್ನೇ ಮಾಡ್ತಾ ಬಂದಿದ್ದರು. ಪಾತ್ರಕ್ಕೆ ನ್ಯಾಯ ಒದಗಿಸ್ತಾರೆ ಅಂತ ಪ್ರಶಂಸೆಗೆ ಪಾತ್ರರಾದವರು ಈ ಕಾಲದ ಸಿನಿಮಾದ ಅಬ್ಬರದ ಹಾಡು, ಕುಣಿತ, ವಿಪರೀತದ ಸ್ಟಂಟ್ ಗಳು ಇವರಿಗೆ ಸರಿಹೋಗದೆ ಹೀಗಾಗಿದೆ.

'ಹಳೇ ಸಿನಿಮಾ ಕಲಾವಿದರ ಬಗ್ಗೆ ಏನೂ ಗೊತ್ತಿರಲ್ಲ ನಿಮಗೆ' ಅಂತ ರಘುಪತಿಯ ಕಡೆಗೆ ಬಂದು ಎರಡು ಕೈ ಜೋಡಿಸಿ ನಮಸ್ಕರಿಸ್ತಾರೆ. 'ಸಾರೀ ಸರ್, ತಪ್ಪಾಗಿ ಹೋಗಿದೆ, ನಮ್ಮವರಿಗೆ ನಿಮ್ಮ ಪೂರ್ವಕಾಲದ ವೈಭವಗಳು ತಿಳಿಯದೇ ಹೋಗಿದ್ದೇ ಅಸಲಿ ನೀವ್ಯಾರೆಂದು ಕೂಡ ಗುರುತಿಸಲಾಗದೆ ನಿಮ್ಮ ಪ್ರತಿಭೆಯ ಬಗ್ಗೆಯೂ ತಿಳಿಯದೆ ಇಂಥ ಬಂದು ಹೋಗುವ, ಗುರುತಿಸದ ಪಾತ್ರವನ್ನು ಕೊಟ್ಟಿದ್ದಾರೆ. ಬಿಟ್ಟು ಬಿಸಾಕಿ ಈ ಪಾತ್ರವನ್ನು ನೀವು ನಮ್ಮ ಸೀರಿಯಲ್ ನಲ್ಲಿ ಅಭಿನಯಿಸ್ತಾ ಇರೋದೇ ನಮ್ಮ ಪುಣ್ಯ'. ಡೈರೆಕ್ಟರ್ ಕಡೆ ತಿರುಗಿ ಇವರಿಗೆ ರನ್ನಿಂಗ್ ಕ್ಯಾರೆಕ್ಟರ್, ಕಂಟಿನ್ಯೂ ಆಗುವಂಥ ಮುಖ್ಯಪಾತ್ರ ಯಾವುದಾದ್ರು ಕೊಡ್ರಿ! ನಮ್ಮ ಸೀರಿಯಲ್ ಟಿ.ಆರ್.ಪಿ. ಒಂದೇ ವಾರದಲ್ಲಿ ಹೇಗೆ ಮೇಲೇರುತ್ತೆ ನೋಡ್ತಾ ಇರಿ! ಟಾಪ್‌ಗೆ ಹೋಗಿ ಬಿಡದಿದ್ರೆ ಕೇಳಿ' ಹರ್ಷದಿಂದ ಉದ್ಗರಿಸುತ್ತಾ, ರಘುಪತಿಯ ಭುಜ ತಟ್ಟಿ 'ಬರ್ತೀನಿ ಸರ್! ಥ್ಯಾಂಕ್ಯೂ ವೆರಿಮಚ್' ಕೈ ಕುಲುಕಿ ಅವಸರವಸವರಾಗಿ ಹೊರಟು ಹೋಗುತ್ತಾನೆ ಪ್ರೊಡ್ಯೂಸರ್.

ಡೈರೆಕ್ಟರ್ ಗದ್ಗದ ದನಿಯಿಂದ 'ಸಾರೀ ಸರ್, ಒಳ್ಳೆ ರನ್ನಿಂಗ್ ಕ್ಯಾರೆಕ್ಟರ್ ಗೆ ನಿಮ್ಮನ್ನ ಫಿಕ್ಸ್ ಮಾಡಿ ಕರಿಸ್ತೀನಿ ಸದ್ಯದಲ್ಲೇ, ಒಂದೆರಡು ದಿನ ಟೈಮ್ ಕೊಡಿ ಸಾಕು. ಬಿಟ್ಟು ಬಿಡಿ ಈ ಪಾತ್ರವನ್ನ' ಎಂದು ತಲೆತಗ್ಗಿಸಿ ಕೇಳಿಕೊಳ್ಳುತ್ತಾನೆ

'ಅಯ್ಯೋ,,. ಇದೆಂಥಾ ಮಾತು ಸರ್, ಈ ಪಾತ್ರವನ್ನಾದರೂ ನನಗೆ ಕೊಟ್ಟಿದ್ದಕ್ಕೆ ನಾನೇ ನಿಮಗೆ ಕೃತಜ್ಞತೆ ತಿಳಿಸುತ್ತೇನೆ, ಪರವಾಗಿಲ್ಲ ಬಿಡಿ'

ರೂಮ್ ಗೆ ಬಂದ ರಘುಪತಿಯ ಎದೆ ಹೂವಿನಂತೆ ಹಗುರವೆನ್ನಿಸಿದೆ. ತನ್ನನ್ನ,ತನ್ನ ಪ್ರತಿಭೆಯನ್ನ ಯಾರಾದರೂ ಗುರುತಿಸುವರೆಂಬ ನಿರೀಕ್ಷೆಯೇ ಹೊರಟು ಹೋಗಿತ್ತು. ಮತ್ತೆ, ಇಷ್ಟು ವರ್ಷಗಳ ಮೇಲೆ ತಾನು ಮತ್ತೆ ಮಿಂಚುವ ತಾರೆಯಾದೇನೆ? ಈ ಸೀರಿಯಲ್ ಮೂಲಕ ತನಗೊಂದು ಒಳ್ಳೆ ರೋಲ್ ಸಿಕ್ಕಿದರೆ ತಾನು ಏನು ಅನ್ನೋದನ್ನ ಪ್ರೂವ್ ಮಾಡಬಹುದು! ಮತ್ತೆ ಬೇರೆ ಸೀರಿಯಲ್ ನಿಂದಲೂ ತನಗೆ ಆಫರ್ಸ್ ಬರಬಹುದು. ಆಮೇಲೆ... ಮತ್ತೆ ಸಿನಿಮಾಗಳಿಂದಲೂ ತನಗೆ ಕರೆಗಳು ಬರಲಾರಂಭಿಸಲೂ ಬಹುದು ವಾವ್! ದೇವರೇ, ಈ ಕನಸುಗಳೇ ನಿಜವಾಗಲಿ, ತನಗೆ, ಸರಸ್ವತಿಗೆ ಮತ್ತೆ ಒಳ್ಳೆಯ ದಿನಗಳು, ಸ್ವರ್ಣಯುಗವೇ ಪ್ರಾರಂಭವಾಗಬಹುದು. ನೂರೆಂಟು ಕನಸುಗಳು. ಒಂದು ದಿನ ಕಳೆಯಿತು ..ಎರಡು ದಿನ ... ಮೂರು....ನಾಲ್ಕು.... ಐದು .. ಫೋನ್ ಕಾಲ್ ಬರಲಿಲ್ಲ ...ಒಂದು ವಾರ ವಾಯಿತು, ಸುದ್ದಿಯೇ ಇಲ್ಲ ....ಕರೆ ಬರಬಹುದು ಎನ್ನುವ ಆಸೆ ಕೂಡ ಕ್ಷೀಣಿಸುತ್ತಿದೆ.

ಒಂದು ದಿನ ರಾಜುವಿನೊಟ್ಟಿಗೆ ಕೇಳಿದ 'ಹೋಗಲಿ ಮೊದಲು ಕೊಡಿಸುತ್ತಿದ್ದ ಜೂನಿಯರ್ ಕಲಾವಿದನಾಗೇ ಉಳೀತೀನಿ. ಅದನ್ನಾದರೂ ಕೊಡಿಸಿದ್ರೆ ... 'ಅಂತ ಅನ್ನುವಷ್ಟರಲ್ಲಿ 'ಸಾರ್! ಅಯ್ಯೋ! ನಿಮ್ಮ 'ತಾರಾಮೌಲ್ಯ'ದ ವಿಚಾರ ಎಲ್ಲರಿಗೂ ಹಾಗೂ ಪ್ರೊಡ್ಯೂಸರ್‌ಗಳಿಗೆ ತಿಳಿದುಬಿಟ್ಟಿದೆ. ಜೂನಿಯರ್ ಆರ್ಟಿಸ್ಟ್ ಆಗಿ ನಿಮ್ಮನ್ನ ಕರಿಸೋದು ಸಾಧ್ಯವೇ ಇಲ್ಲ ಈಗಿನ ಪರಿಸ್ಥಿತಿಯಲ್ಲಿ. ಎಲ್ಲರೂ ನಿಮ್ಮ ಹಳೇ ಪಾತ್ರಗಳ ಬಗ್ಗೆಯೇ ನೆನೆಸಿಕೊಂಡು ಮಾತ್ನಾಡ್ತಾ ಇದ್ದಾರೆ! ನಿರಾಸೆಯಾಗುತ್ತೆ ಇಬ್ಬರಿಗೂ.

ಇನ್ನೊಂದು ಹತ್ತು ಹನ್ನೆರಡು ದಿನಗಳು ಕಳೆದಿದ್ದಾನೆ. ದೈನಂದಿನ ಸಂಪಾದನೆಯೂ ಇಲ್ಲ, ತಿಂಡಿ, ಊಟ ಅಂತ ಖರ್ಚಿಗೂ ಕಾಸಿಲ್ಲ... ರಾಜುವೂ ತನ್ನನ್ನು ಸಾಕಲು ಸಾಧ್ಯವಾಗುತ್ತಿಲ್ಲ. ಅತ್ತ ಊರಿನಲ್ಲಿ ಸರಸ್ವತಿಗೆ ಮತ್ತೆ ಆರೋಗ್ಯ ಏರುಪೇರಾಗಿದೆ. ಮತ್ತೆ ಊರಿಗೆ ವಾಪಸ್ ಹೊರಟು ಹೋಗೋಣವೆಂದರೆ ಅಂಗಡಿ ಗುಮಾಸ್ತನ ಕೆಲಸವೂ ಈಗ ಇಲ್ಲ. ತಾನೇ ಬಿಟ್ಟು ಬಂದಿದ್ದರಿಂದ ಮತ್ತೆ ಅದೂ ಸಿಗುವುದಿಲ್ಲ.

ಅಯ್ಯೋ ದೇವರೇ. ಇದೇನು ನಿನ್ನ ಆಟ. ನನ್ನವರೆಂದವರ ಜೀವನದಲ್ಲಿ 'ತಾರಾ ಮೌಲ್ಯ' ಅಥವಾ 'ತಾರಾ ವೆಚ್ಚ', 'ಇಮೇಜ್' ಏನೂ ಬೇಕಾದರೂ ಕರೆಯಬಹುದು. ಆದರೆ ಇದೇ ಒಂದು ಶಾಪವಾಗಿ ನನ್ನ ಕಾಡಿತೇ? ಹಾಗಾದರೆ ನನ್ನ ಯಾರೂ ಗುರುತಿಸದಿರಲಿ ತಂದೆ' ಎಂದು ಆಕಾಶಕ್ಕೆ ಮುಖವೆತ್ತಿ ಗಂಟಲು ಹರಿದು ಹೋಗುವ ಹಾಗೆ ಅರಚಬೇಕು ಅನ್ನಿಸಿದೆ ರಘುಪತಿಗೆ. ಕಣ್ಣ ನೀರು ಅಡೆತಡೆಯಿಲ್ಲದೆ ಹರಿಯುತ್ತಿದ್ದುದು ಆ ದೇವರು ಇದ್ದಾನೋ ಇಲ್ಲವೋ ಯಾರಿಗೆ ಗೊತ್ತು?

■